
ಇರುವುದರ ಗುಟ್ಟು ಬಿಟ್ಟಿರಲಿಲ್ಲ. ಪೆಟಾರಿಯನ್ನು ಖಾಲಿ ಮಾಡಿದ್ದೇವೆಂದುಕೊಂಡ ಮಕ್ಕಳು ಅಮ್ಮನ ಕಡೆ ಸಣ್ಣ ನಿರ್ಲಕ್ಷ್ಯ ಮಾಡಿದರು. ಅವ್ವ ತುಪ್ಪದಾಗ ಕೈತೊಳದಾಕೆ. ಮಕ್ಕಳ ಈ ನಡತೆಗೆ ಏನೂ ಬೇಜಾರಾಗಲಿಲ್ಲ. 'ಇದ್ದುದರಲ್ಲೆ ದೊಡ್ಡ ಸೊಸೆ ಶಾರದಕ್ಕ ಪರುವಿಲ್ಲ ಉಡುಗಿ ನನ್ನ ನೋಡಿಕೆಂತಾಳ' ಅನಿಸತೊಡಗಿದ ಅವ್ವ ಅವಳನ್ನ ಕರೆದು ಪೆಟಾರಿ ತುಂಬ ಇದ್ದ ಐನೂರುಸಾವಿರ ಕಟ್ಟುಗಳನ್ನು ತೋರಿಸಿದ್ದಳು. ದಿನಗಳದಂತೆ ಅದರ ಕಟ್ಟುಗಳೂ ಸರಿಯತೊಡಗಿದಂತೆ ಅವ್ವ ಚಿಂತೆಗೊಳಗಾಗಿ "ಈ ಮಕ್ಳು ಯದರಾಗಿಲ್ಲದ ಮುಂಡೆಮಕ್ಳು ದುಡೆಂಗಿಲ್ಲ ದುಕ್‌ಬಡೆಂಗಿಲ್ಲ. ಕುಂತಗಂಡ್ ಉಂಡರೆ ಕುಪ್ಪೆಗುಡ್ಡದೋಟು ರೊಕ್ಕ ಸಾಲದಿಲ್ಲ" ಅಂತಲೇ ಬಿಡಿಗಾಸೂ ಕೇಳಿದರೂ ಕೊಡಲಿಲ್ಲ. ಅವ್ವನನ್ನ ಬಂಗಾರದಂಗ ಸಾಕತಿದ್ದವರು ಊಟವೂ ಕೊಡಲಾರದ ನಿರ್ದಯಿಗಳಾದರು.



ಬಸಮ್ಮವ್ವ ಸ್ವಾಭಿಮಾನಿ. ಅದೇ ಮನೆಯ ಮಾನ ಕಳಿಬಾರದು ಅಂತ, ಎಲ್ಲಿಯೂ ಒಳಗಣ ಕುದಿಯನ್ನು ತೋರಗೊಡಲಿಲ್ಲ. ಪಡಸಾಲಿಗೆ ಅಂಟಿಕೊಂಡ ಅಂಗಡಿ ಕಟ್ಟೆಯ ಸಣ್ಣ ಕೋಣೆಯಲ್ಲಿ ಸೇರಿಕೊಂಡಳು. ಮನಸ್ಸು ಭಾರವಾದಂತಾಗಿ ಚಂಬಸಪ್ಪನನ್ನು "ಎಂಥಾ ಮಕ್ಕಳನ್ನು ಉಟ್ಟಿಸಿ ಓದಿ. ಬಂಜೆ ಆಗಿದ್ರನ್ನ ಬೇಸಿತ್ತು. ಅಪ್ಪನಂಥ ಮಕ್ಳು ಉಟ್ಟಲಿಲ್ಲ ನನ್ನಣೆಬಾರಕ್ಕ ಬೆಂಕ್ಯಚ್ಚ. ನಾನ್ಯಾ ಜಲುಮದಾಗ ಕರ್ಮಮಾಡಿದ್ನೊ. ದೇವರಂಬೋನಿಗೆ ಕರುಣೆಲ್ಲ. ದೇವ್ರ ನಂಬಿ ಈಸು ವರ್ಸ ನೆಡಕೊಂಡು ಮಕ್ಕಳನ್ನ ದೊಡ್ಡೋರು ಮಾಡು ತಂದೆ ಅಂತ ಬೇಡಿಕೆಂಡೆ. ಇವು ನೋಡಿದ್ರೆ ಇಂಗ ಮಾಡ್ತಾವ. ದೇವ್ರ ಗುಡಿಗೆ ಬೇಲಿಬಡಿಯಾ ಯಾ ದೇವ್ರು" ಅಂತ ಒಂದೇ ಸಮನೆ ಅತ್ತು ಅತ್ತು ಗೋಡೆಗೆ ಒರಗಿ ಜಂಪು ನಿದ್ದೆಗೆ ಜಾರಿದಳು ಅವ್ವ.

ಮಕ್ಳು ಸೊಸ್ತೇರು ಪಡಸಾಲಿಯಲ್ಲಿ ಟಿ.ವಿ. ನೋಡುತ್ತಾ ಊಟ ಮಾಡುತ್ತಿದ್ರು. ಶಿವರುದ್ರ "ಆಯಮ್ಮನ ಉಂಬಕನ್ನ ಕರಿರಿ" ಅಂದ. ಒಟ್ಟೇಸ್ಗಂಡ್ರೆ ತಾನೇ ಬರ್ತಾಳೋಳು, ಕರೇಕೇನನ್ನ ಈ ಮನಿಗೆ ಬೀಗತಿನಾ ಅಂದಳು ಶಾರದಕ್ಕ. ಬಸಮ್ಮವ್ವಗ ಈ ಮಾತು ಸಣ್ಣಗ ಕಿವಿಗೆ ಬಿತ್ತು. ನಿತ್ತರಿಸಿಕೊಂಡಳು. ಮನಸು ತಡಿಲಿಲ್ಲ "ಎಲೋ ಇದೀಟು ರೊಕ್ಕ ಇರದಕ್ಕಲ್ಲ ನೀವು ಇಂಗ ಮುದ್ದೆ ಕೂಳು ಹಾಕುವಲ್ರಿ. ಇದೇ ರೊಕ್ಕ ಯಾರಿಗಿಟ್ಟು ಓಗಲಿ. ನಿಮ್ ಸಲುವಾಗೆಲ್ಲ ಇಟ್ಟಿರಾದು, ನನಗಂಡ ಸಂಪಾಸಿರಾ ಮನೆ, ಹೊಲ, ಆಸ್ತಿನ ತಗಂಡು ಒಂದು ರಟ್ಟೆತುಂಡು, ಮುದ್ದೆ ಕೂಳು ಆಕಾಕ ಏಟು ಮಾಡ್ತೂರಿ. ಅಯ್ಯಯ್ಯ ನನ್ ಒಟ್ಯಾಗ ಉಟ್ಟಿರೋ, ಇಲ್ಲ ಒಂದೂ ತಿಳಿವಲ್ದು" ಅಂತ ಜೋರಾಗಿ ಅರಚಿದಳು. ಟಿ.ವಿ.ಯಲ್ಲಿ ಬರುತ್ತಿದ್ದ ಬ್ರೇಕಿಂಗ್ ನ್ಯೂಸ್‌ನ್ನು ಊಟ ಮಾಡದೆ ಜೋರಾಗಿ ಸೌಂಡ್ ಹಚ್ಚಿ ಕೇಳುತ್ತಿದ್ದವರಿಗೆ ಅವ್ವನ ಮಾತು ಕೇಳಿಸಲಿಲ್ಲ.

ಬ್ರೇಕಿಂಗ್ ನ್ಯೂಸ್ "ನಾಳೆಯಿಂದ ಐನೂರು ಸಾವಿರ ನೋಟುಗಳು ಬರೀ ಕಾಗದದ ಚೂರುಗಳು! ಬದಲಾಯಿಸಿಕೊಳ್ಳಲು ಸಮಯ ನೀಡಿದ ಸರ್ಕಾರ" ಎಂಬುದನ್ನು ಕೇಳಿ ಕಿವಿ ನಿಮಿರಿಸಿಕೊಂಡ ಬಸಲಿಂಗ. 'ಅಮ್ಮ ಉಮ್ಮನಾ ಬಾಂಗೆ, ಸೊಲಪು ಅನ್ನ ಹಾಲು ಉಣಮ್ಮ' ಎಂದು ಕರೆದಂತೆ ಮಾಡಿ ಬ್ರೇಕಿಂಗ್ ಸುದ್ದಿ ಯಾವುದನ್ನೂ ಅವ್ವನಿಗೆ ಹೇಳದೆ, ಯಮ್ಮ ಅವ್ವು ಶೇಷ ಹೊಲ ಮಾರತಾನಂತ ರೊಕ್ಕನ್ನ ಕೊಡು ತಗಮ್ಮತೀನಿ ಅಂದ. ಕೆಂಪಾದ ಕಣ್ಣು ಒರೆಸಿಕೊಂಡ ಅವ್ವ ಜಾಣತನ